ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಬಗ್ಗೆ :

741 ಶ್ರೀ ಖಾದರ್.ಯು.ಟಿ. (ಮಂಗಳೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಮತ್ತು ರೈತರು ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಸಂಕಷ್ಟದಲ್ಲಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ನಷ್ಟದ ಪ್ರಮಾಣ ಎಷ್ಟು ಹಾಗೂ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ;

ಇ) ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವಾಹ ಪೀಡಿತ ಪ್ರದೇಶವೆಂದು ಘೋಷಿಸಲಾಗುವುದೇ?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯು ಅನಾವೃಷ್ಟಿಗೆ ತುತ್ತಾಗಿರುವುದಿಲ್ಲ ಜುಲೈ 2009ರಲ್ಲಿ ಬಿದ್ದ ಮಳೆಯಿಂದ ಹಾನಿಯಾಗಿರುತ್ತದೆ.

ಆ) ಜುಲೈ 2009ರಲ್ಲಿ ಬಿದ್ದ ಮಳೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿರುವ ಹಾನಿ ಹಾಗೂ ತೆಗೆದುಕೊಂಡ ಪರಿಹಾರ ಕಾರ್ಯ ಕೆಳಕಂಡಂತೆ ಇರುತ್ತದೆ.

ಹಾನಿಯ ರೀತಿ	ಹಾನಿ ಪ್ರಮಾಣ (ಸಂಖ್ಯೆ)	ನೀಡಿರುವ ಪರಿಹಾರ
1. ಕೃಷಿ ಬೆಳೆಹಾನಿ	106.75 ಹೆ.	ರೂ. 1,51 ಲಕ್ಷ
2. ತೋಟಗಾರಿಕೆ ಬೆಳೆ	13.85 ಹೆ.	ರೂ. 85,000/–
3. ಮಾನವ ಜೀವಹಾನಿ	18	ರೂ. 16,00 ಲಕ್ಷ
4. ಗಾಯ ಗೊಂಡವರು	7	ರೂ. 14,500/–
5. ಜಾನುವಾರು ಹಾನಿ	10	ರೂ. 88,000/–
6. ರಸ್ತೆ ಹಾನಿ	825.05 ಕಿ.ಮೀ.	

7. ಸೇತುವೆ/ಮೋರಿ ಹಾನಿ	102	
8. ಕಟ್ಟಡ ಹಾನಿ	967	
9. ಸಣ್ಣ ನೀರಾವರಿ ಆಸ್ತಿಗಳು	45	
10. ನೀರು ಪೂರೈಕೆ/ ನೈರ್ಮಲ್ಯ	2	
11. ಇತರೆ ಹಾನಿ	649	
12. ವಿದ್ಯುತ್ ಪರಿಕರ	1338	

ತುರ್ತು ಪರಿಹಾರ ಕಾರ್ಯಕೈಗೊಳ್ಳಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೂ.1800.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) ಇಲ್ಲ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಕೊಟ್ಟಿರುವ ಈ ಉತ್ತರದಿಂದ ನನಗೆ ಅರ್ಥವಾಗುವುದೇನೆಂದರೆ, ಸರ್ಕಾರ ದಕ್ಷಿಣ ಕನ್ನಡ ಜಿಲ್ಲೆಯ ರೈತರು, ಕೃಷಿಕರ ನಿಜವಾದ ಸಮಸ್ಯೆಯನ್ನು ಇದುವರೆಗೂ ಅರ್ಥ ಮಾಡಿಕೊಂಡಿಲ್ಲ. ಇವತ್ತಿನ ಶಾರ್ಟ್ ಟರ್ಮ್ ಕ್ರಾಪ್‌ನ ಸಮಸ್ಯೆ ಬೇಗ ಕಣ್ಣಿಗೆ ಕಾಣುತ್ತದೆ. ದೀರ್ಘಾವಧಿ ಬೆಳೆಯಾದ ಅಡಿಕೆ, ತೆಂಗು ಇತ್ಯಾದಿ ಬೆಳೆಗೆ ಆಗುವ ನಷ್ಟ ತ್ಕಣ ಕಣ್ಣಿಗೆ ಕಾಣುವುದಿಲ್ಲ. ಆದರೆ, ಅದು ನಿಧಾನವಾಗಿ ಸಮಸ್ಯೆಯನ್ನು ಉಂಟು ಮಾಡುತ್ತದೆ. ಅಲ್ಲಿ ಹಲವಾರು ಕೋಟಿ ರೂಪಾಯಿ ನಷ್ಟವಾಗಿದೆ. ಆದರೆ, ಇಲ್ಲಿ 180 ಕೋಟಿ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಇಂಥ ಒಂದು ಸಂದರ್ಭದಲ್ಲಿ ಇದರ ಬಗ್ಗೆ ವಿಶೇಷವಾದಂಥ ತಜ್ಞರ ಸಮಿತಿ ರಚನೆ ಮಾಡಬೇಕು. ಆ ಪ್ರದೇಶದ ರೈತರು, ಕೃಷಿಕರಿಂದ ಸಮಸ್ಯೆ ತಿಳಿದುಕೊಂಡು ನಿಜವಾದಂಥ ಒಂದು ಪರಿಹಾರ ಕೊಡುವಂಥ ಕೆಲಸವನ್ನು ಸರ್ಕಾರ ಇವತ್ತಿನ ದಿವಸ ಮಾಡಬೇಕಾಗಿದೆ. ಇವತ್ತಿನ ದಿವಸ ಸರಿಯಾದ ಬೆಲೆ ಇಲ್ಲದೆ ಇರುವುದರಿಂದ ಕೃಷಿಕರು ಕಷ್ಟದಲ್ಲಿರುವಾಗ ಸೊಸೈಟಿ ಮತ್ತು

ಬ್ಯಾಂಕ್‌ನವರು ಹಣ ವಸೂಲಿ ಮಾಡುವುದಕ್ಕೆ ಮನೆಗೆ ಹೋಗುವಂಥದ್ದನ್ನು ಒಂದು ವರ್ಷದ ಮಟ್ಟಿಗೆ ನಿಲ್ಲಿಸಬೇಕೆಂದು ಹಾಗೂ ಇದಕ್ಕೆ ಪರಿಹಾರದ ಹಣವನ್ನು ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಕರುಣಾಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ, ತಜ್ಞರ ಸಮಿತಿ ರಚನೆ ಮಾಡಿ ಧೀರ್ಘಾವಧಿ ಬೆಳೆ ನಷ್ಟದ ಬಗ್ಗೆ ಪರಿಶೀಲನೆ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಖಂಡಿತ ಸಂಬಂಧಪಟ್ಟಂಥ ಇಲಾಖೆಗೆ ಸೂಚನೆ ಮಾಡಿ ಅದರ ಬಗ್ಗೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಯು.ಟಿ.ಖಾದರ್ : ತಜ್ಞರ ಸಮಿತಿಗೆ ಸಂಬಂಧಪಟ್ಟಂಥ ಮಾಹಿತಿಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ.

ಅಧ್ಯಕ್ಷರು : ಆಯಿತು. ಮಾನ್ಯ ಮಹದೇವ ಪ್ರಸಾದ್‌ರವರ ಪ್ರಶ್ನೆ ಮುಜರಾಯಿ ಇಲಾಖೆಗೆ ವರ್ಗಾವಣೆಯಾಗಿರುತ್ತದೆ. ಆನಂತರ ಇದರ ಉತ್ತರ ಒದಗಿಸಲಾಗುತ್ತದೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಸದರಿ ಪ್ರಶ್ನೆಯ ಬಗ್ಗೆ ಚರ್ಚೆ ಮಾಡುವಂಥದ್ದು ಏನಿಲ್ಲ. ಏಕೆಂದರೆ, ಮಾನ್ಯ ಮುಖ್ಯ ಮಂತ್ರಿಯವರಿಗೆ ಈ ವಿಚಾರ ಗೊತ್ತಿದೆ. ಅದು ಕೇವಲ ಮುಜರಾಯಿ ಇಲಾಖೆಗೆ ಸಂಬಂಧಪಟ್ಟಿರುವುದಿಲ್ಲ. ಇದರ ಬಗ್ಗೆ policy decision ಆಗಬೇಕಾಗಿದೆ.

ಅಧ್ಯಕ್ಷರು : ಇದೇ ಅಧಿವೇಶನದಲ್ಲಿ ನಿಮ್ಮ ಪ್ರಶ್ನೆಗೆ ಉತ್ತರ ಬರುತ್ತದೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಆಯಿತು.

(10-30 AM)

ಅಧ್ಯಕ್ಷರು : ಸುನೀಲ್ ವಿ. ಹೆಗಡೆ ಯವರ ಪ್ರಶ್ನೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ವರ್ಗಾವಣೆಯಾಗಿರುತ್ತದೆ, ಇದು ಮುಂದಿನ ಸಲ ಬರುತ್ತದೆ. ಮಾನ್ಯ ರಾಮಲಿಂಗಾರೆಡ್ಡಿಯವರೆ ನೀವು ಪ್ರಶ್ನೆಯನ್ನು ಕೇಳಿ.